

# ನುಡಿ ರಾಜಕಾರಣ

**ಭಾ**ಷೆ ಎನ್ನುವ ಪ್ರಾಣವಾಯುವಿನ ಬಗ್ಗೆ ಉತ್ಸಾಹದಿಂದ, ಕೃತಜ್ಞತೆಯಿಂದ, ಪ್ರೀತಿಯಿಂದ ಬರೆಯಬೇಕು ಎಂದು ಅಂದುಕೊಳ್ಳುತ್ತಿರುವಾಗಲೇ ಈ ಸುದ್ದಿ ಕಣ್ಣಿಗೆ ಬಿತ್ತು. ಸಚಿವೆಯೊಬ್ಬರನ್ನು 'ಐಟಂ' ಎಂದು ಕರೆದದ್ದಕ್ಕೆ ಮಾಜಿ ಮುಖ್ಯಮಂತ್ರಿಯೊಬ್ಬರು, ಬೇಕಾದರೆ ವಿಷಾದ ವ್ಯಕ್ತಪಡಿಸಬಲ್ಲೆನೇ ಹೊರತು ಕ್ಷಮೆ ಕೇಳಲಾರೆ ಎನ್ನುವ ಹೇಳಿಕೆ ಕೊಟ್ಟಿದ್ದಾರೆ. ಇಂಥ ಪ್ರಕರಣಗಳೇನೂ ಹೊಸದಲ್ಲ. ಹೆಣ್ಣನ್ನು ಆಳಲು ಇರುವ ಪ್ರಮುಖ ಅಸ್ತ್ರಗಳಲ್ಲಿ, ಮಾಧ್ಯಮಗಳಲ್ಲಿ ಭಾಷೆಯು ತುಂಬಾ ಶಕ್ತಿಶಾಲಿಯಾದುದು. ಹೆಣ್ಣು ಮಾತ್ರವಲ್ಲ, ವಂಚಿತ ಸಮುದಾಯಗಳನ್ನು ಭಾಷೆಯ ಮುಕ್ತ, ಸ್ವಂತ ಬಳಕೆಯಿಂದ ವಂಚಿತವಾಗಿಸಿದ್ದಲ್ಲದೆ, ಅವರನ್ನು ಕುರಿತು ಬಳಸುವ ಭಾಷೆಯಿಂದಲೇ ಅವರನ್ನು ನಿಯಂತ್ರಿಸಬಲ್ಲ ಶಕ್ತಿಯನ್ನು ಹೊಂದಿದೆ. ಭಾಷೆಯನ್ನು ಕುರಿತು ರಮ್ಯ, ಭಾವುಕ ನೆಲೆಯಿಂದ ಬರೆಯಲು ಹೊರಟ ಈ ಲೇಖನ ಅದರ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ರಾಜಕಾರಣದ ನಿರೂಪಣೆಯ ನೆಲೆಯಿಂದ ಆರಂಭವಾಗುತ್ತಿದೆ! ಆದರೆ ಇದು ಈ ಕಾಲದ ಅಗತ್ಯವೂ ಹೌದು.

'ಐಟಂ'ನ ಉದಾಹರಣೆಯನ್ನೇ ಮುಂದುವರೆಸಬಹುದು. ಇದನ್ನು ಸಮಾನತೆಯ ಕಾಲ ಎಂದು ಉದ್ಘೋಷಿಸುವ ಪ್ರಭುತ್ವದ ವಕ್ತಾರರೇ ಬಳಸುವ ಈ ಬಗೆಯ ಭಾಷೆಯನ್ನು ಹೇಗೆ ಅರ್ಥೈಸುವುದು? ಇದು ಗಂಡಿನ ಭಾಷೆಯೆಂದೋ? ಆಳುವವರ ಭಾಷೆಯೆಂದೋ? ಎರಡಕ್ಕೂ ಅಂತಹ ವ್ಯತ್ಯಾಸವೇನೂ ಇಲ್ಲ ಎನ್ನುವ ಉತ್ತರ ಅನೇಕ ಸಂಗತಿಗಳನ್ನು ಹೇಳುತ್ತದೆ. ಏನು ಎಷ್ಟೆಲ್ಲ ಬದಲಾವಣೆಗಳಾದಾಗಲೂ ಆಳದಲ್ಲಿ ಗಂಡು ಹೆಣ್ಣನ್ನು ಪರಿಭಾವಿಸುವ ಮನೋದೈಹಿಕ ಮತ್ತು ಬೌದ್ಧಿಕವಾದ ಅನುಕ್ತವಾದ ಭಾಷೆಗೂ, ಉಕ್ತವಾಗಿ ಪ್ರಕಟವಾಗುವ ಭಾಷೆಗೂ ಇರುವ ಅವಿನಾ ಸಂಬಂಧವನ್ನು ಇದು ಹೇಳುತ್ತದೆ. ಒಳಗಿನ ಭಾವ ಮತ್ತು ವಿಚಾರಗಳೇ 'ಹೊರ ಭಾಷೆ'ಯಾಗಿ ಉಚ್ಚಾರವಾಗುತ್ತದೆ. 'ಒಳ ಭಾಷೆ'ಯೇ ನಿಜವಾದ ಭಾಷೆ. ಎರಡನೆಯ ಸಂಗತಿಯೆಂದರೆ, ತಾನು

